ಮಂದ ಆಗಿದ್ದ ಅಯ್ಯ ಮಾತ್ರ ನನ್ನನ್ನು ಹತ್ತಿರ ಕರೆದು,

"ನಿಮಕ್ಕ ಎಷ್ಟ ಚನಾಗಿ ಎಕ್ಸಾಮ್ ಬರುದು ಸರ್ಕಾರಿ ಲೆಕ್ಚರರ್ ಆಗಿದ್ಲು ಕಣಮು... ಬದಿಕಿದ್ರೆ ಬೀ ಈ ಓ ಆಗಿ ರಿಟೈರ್ ಆಗತಿದ್ಲು... ಥೂ! ಬ್ಯಾಡ್ ಲಕ್..." ಅಂತ ಬೇಸರ ಮಾಡಿಕೊಳ್ಳುತ್ತಿದ್ದರು... ಅಂಥಾ ಸಂದರ್ಭದಲ್ಲೂ ನಮಗೆ ಅಳು ಮೀರಿ ನಗು ಬರುವ ಹಾಗೆ!

ಒಮ್ಮೆ ಬೆಂಗಳೂರಿನಲ್ಲಿ ಓಲಾ ಶೇರ್ ಟ್ಯಾಕ್ಸಿ ಹಿಡಿದೆ. ಇನ್ನೊಬ್ಬರು ಮತ್ತೊಂದು ಪಾಯಿಂಟಿನಿಂದ ಹತ್ತುವ ಹೊತ್ತಿಗೆ ನಾನು ನನ್ನ ಊರಿನ ಸ್ನೇಹಿತರ ಹತ್ತಿರ ಮಾತನಾಡುತ್ತಿದ್ದೆ. ತಂತಮ್ಮ ಊರಿನ ಭಾಷೆಯ ಬಗ್ಗೆ ಒಂದು ಪಕ್ಷ ಮೋಹ ಇಲ್ಲದಿದ್ದರೂ ಊರಿನ ಜನಗಳ ಬಗ್ಗೆ ಕುತೂಹಲ ಇರುತ್ತದೆ ಎನ್ನುವುದು ನನ್ನ ಅನುಭವ.

ನನ್ನ ಮಾತು ಮುಗಿಯುವ ಹೊತ್ತಿಗೆ ಅವರೂ ಇನ್ಯಾರಿಗೋ ಫೋನ್ ಮಾಡಿ ಅದೇ ಧಾಟಿಯಲ್ಲಿ ಮಾತನಾಡಿದರು. ಅಂದರೆ ಮುಂದೆ ಮಾತನಾಡಲು ಇಂಟ್ರೊಡಕ್ಷನ್ ಸುಲಭ ಆಗಲಿ ಅಂತ ಇರಬೇಕು.

ಇಬ್ಬರೂ ಕಾಲ್ ಮುಗಿಸಿದ ಮೇಲೆ ಟ್ಯಾಕ್ಸಿಯಲ್ಲಿ ಒಂಥರಾ ಮುರಿಯಲೆಂದೇ ಉಂಟಾದ ಕ್ಷಣಿಕ ಶೂನ್ಯ ಹೀಗೆ ಪರದೆಯ ಥರ ಬಿದ್ದಿತ್ತು.

ಮೊದಲಿಗೆ ನಾನೇ ಸರಿಸಿದೆ.

"ನೀವೂ ದಾವಣಗೆರೆಯೋರಾ?"

"ಹೌದು... ನೀವೋ ಅಲ್ಲಿಯೋರೇ ಅಂದ್ಕಂಡೆ..."

"ಹೌದು..."

"ಎಲ್ಲಿ ಅಲ್ಲಿ?"

"ವಿದ್ಯಾನಗರ..."

"ಹೌದಾ? ಅಲ್ಲೆಲ್ಲಿ?"

"ಮೊದಲ್ನೇ ಕ್ರಾಸು..."

"ನೀವೂ..."

"ನಮ್ಮಪ್ಪ ಪ್ರಿನ್ಸಿಪಾಲ್ ಆಗಿದ್ರು..."

"ಓ ನಮ್ ಡಿ ಆರ್ ಎಮ್ ಪ್ರಿನ್ಸಿ (!) ಮಗಳಾ?"

"ಹೌದು..."

"ಹೋ ಮೇಷ್ಟ್ರುನ್ನ ನೋಡಿ ಬಾಳಾ ದಿನಾತು."

"ಹೌದಾ?"

"ಅವ್ರು ರಿಟೈರ್ ಆಗೇ ಭಾಳ ವರ್ಷಾತಲ?"

"ಹೌದು..."

"ಹೆಲ್ತು ಚನಾಗಿಲ್ಲ ಅಂತ ಕೇಳಿದೆ... ನಿಮ್ಮಕ್ಕ ಒಬ್ಳು ತೀರ್ಕಂಡ್ಲಲ್ಲ?"

"ಹೌದು?"

"ನಿಮ್ಮಪ್ಪರು?"

"ಹಾ?"

ಕಸಿವಿಸಿ ಆಯಿತವರಿಗೆ... ಆದರೂ ಸಂಭಾವಿತ ವಾಕ್ಯ ರಚನೆಯ ಸಮಯ ಮೀರಿದ್ದರಿಂದ... ಮುಂದೆ ಕೇಳಿದರು...

"ಅದಾರಾ ಇನ್ನೂ?"